ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆಗಳನ್ನು ಕರ್ನಾಟಕ ರಾಜ್ಯದಲ್ಲಿ 38ಕ್ಕೂ ಹೆಚ್ಚು ಅಭಿವೃದ್ಧಿ ಇಲಾಖೆಗಳು, ಜಿಲ್ಲಾ ಪಂಚಾಯತ್‌ಗಳು, ನಿಗಮ ಮತ್ತು ಮಂಡಳಿಗಳ ಮುಖಾಂತರ ಅನುಷ್ಠಾನ ಮಾಡಲಾಗುತ್ತಿದೆ.

ಈ ಎರಡು ಬೃಹತ್ ಯೋಜನೆಗಳ ಅನುಷ್ಠಾನದ ಪ್ರಗತಿಯನ್ನು ತಾಲ್ಲೂಕು ಮಟ್ಟದ ಸಮಿತಿ, ಜಿಲ್ಲಾ ಮಟ್ಟದ ಸಮಿತಿ, ರಾಜ್ಯ ಮಟ್ಟದ ಸಮಿತಿ ಹಾಗೂ ಉನ್ನತ ಮಟ್ಟದ ಸಮಿತಿಗಳಲ್ಲಿ ಕಾಲಕಾಲಕ್ಕೆ ವಿಮರ್ಶೆ ಮಾಡಲಾಗುತ್ತಿದೆ.

ವಿಶೇಷ ಘಟಕ ಯೋಜನೆಯಲ್ಲಿ ಜನವರಿ ಅಂತ್ಯದವರೆಗೆ ರಾಜ್ಯ ಯೋಜನೆಯಡಿ 158.15 ಕೋಟಿ ರೂ.ಗಳಷ್ಟು ಖರ್ಚು ಮಾಡಲಾಗಿದೆ. ವಿಶೇಷ ಕೇಂದ್ರೀಯ ನೆರವಿನಡಿಯಲ್ಲಿ ಇದುವರೆಗೆ ಮಂಜೂರಾದ 9.36 ಕೋಟಿ ರೂ.ಗಳಲ್ಲಿ 8.34 ಕೋಟಿ ರೂ.ಗಳು ರಾಜ್ಯ ಸರ್ಕಾರ ಬಿಡುಗಡೆ ಮಾಡಿದ್ದು, ಈ ಪೈಕಿ 5.75 ಕೋಟಿಗಳನ್ನು ಜಿಲ್ಲಾ ಪಂಚಾಯತ್, ನಿಗಮಮಂಡಳಿಗಳ ಮೂಲಕ ಖರ್ಚು ಮಾಡಲಾಗಿದೆ.

ಭಾರತ ಸರ್ಕಾರ ಈ ವಿಶೇಷ ಘಟಕ ಯೋಜನೆಯಡಿ, 1,27,000 ಪರಿಶಿಷ್ಟ ಜಾತಿ ಕುಟುಂಬಗಳಿಗೆ ಆರ್ಥಿಕ ಸಹಾಯ ಒದಗಿಸಲು ಗುರಿ ನಿಗದಿಮಾಡಿದ್ದು, ಡಿಸೆಂಬರ್ 1993ರ ವರೆಗೆ 78,740 ಕುಟುಂಬಗಳಿಗೆ ಸಹಾಯ ನೀಡಲಾಗಿದೆ.

ಗಿರಿಜನ ಉಪ ಯೋಜನೆಯಡಿ (ರಾಜ್ಯ ಯೋಜನೆ) ಡಿಸೆಂಬರ್ ಅಂತ್ಯದವರೆಗೆ 7.25 ಕೋಟಿ ರೂ.ಗಳು ಖರ್ಚಾಗಿದ್ದು 11,861 ಕುಟುಂಬಗಳಿಗೆ ಆರ್ಥಿಕ ಸಹಾಯ ಒದಗಿಸಲಾಗಿದೆ. ಭಾರತ ಸರ್ಕಾರವು 9,600 ಗಿರಿಜನ ಕುಟುಂಬಗಳಿಗೆ ಆರ್ಥಿಕ ಸಹಾಯ ಒದಗಿಸಲು ನಿಗದಿಗೊಳಿಸಿದ್ದಕ್ಕಿಂತಲೂ ಹೆಚ್ಚಿನ ಕುಟುಂಬಗಳಿಗೆ ಸಹಾಯ ಒದಗಿಸಲಾಗಿದೆ.

ದಿನಾಂಕ 1-2-94ರಂದು ಮಾನ್ಯ ಮುಖ್ಯ ಮಂತ್ರಿಯವರು ಉನ್ನತ ಮಟ್ಟದ ಸಮಿತಿಯ ಸಭೆಯಲ್ಲಿ ಈ ಯೋಜನೆಗಳ ಪ್ರಗತಿಯ ಪರಿಶೀಲನೆ ನಡೆಸಿ ನಿಗದಿಪಡಿಸಿದ ಆರ್ಥಿಕ ಮತ್ತು ಭೌತಿಕ ಗುರಿಯನ್ನು ಸಾಧಿಸಲು ಕಟ್ಟುನಿಟ್ಟಾದ ಸೂಚನೆ ನೀಡಿರುತ್ತಾರೆ.

ಹೊಳೆನರಸೀಪುರ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಅವ್ಯವಸ್ಥೆ ಕುರಿತು

ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ) : ಮಾನ್ಯ ಅಧ್ಯಕ್ಷರೆ, ಹಾಸನ ಜಿಲ್ಲೆ, ಹೊಳೆನರಸೀಪುರದಲ್ಲಿರುವ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯನ್ನು 50ಹಾಸಿಗೆಗಳಿಂದ 100 ಹಾಸಿಗೆಗಳಿಗೆ ಕಳೆದ 2 ವರ್ಷಗಳ ಹಿಂದೆ ಏರಿಸಲಾಗಿದ್ದು ಇಲ್ಲಿಯವರಿಗೆ ಹಾಸಿಗೆಗಳನ್ನು ಒದಗಿಸುವ ಬಗ್ಗೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಈ ಆಸ್ಪತ್ರೆಗೆ ಸರ್ಕಾರದಿಂದ ಸರಿಯಾದ ಪ್ರಮಾಣದಲ್ಲಿ ಹಣವನ್ನು ಒದಗಿಸಿಲ್ಲ. ಈ ಆಸ್ಪತ್ರೆಯಲ್ಲಿ ಆಂಬುಲೆನ್ಸ್ ಕೆಟ್ಟು ಹೋಗಿ ಅದನ್ನು ದುರಸ್ತಿಗೊಳಿಸಿರುವುದಿಲ್ಲ. ಕಳೆದ ನವೆಂಬರ್ ತಿಂಗಳಿಂದ ಇಲ್ಲಿಗೆ ಡೆಯಟ್ಟು ಒದಗಿಸುತ್ತಿಲ್ಲ. ಈ ಆಸ್ಪತ್ರೆಯಲ್ಲಿ ಯಾವುದೇ ಔಷಧಿಗಳು ದೊರಕುತ್ತಿಲ್ಲ. ಇಲ್ಲಿರುವ ಎಕ್ಸ್‌ರೇ ಯಂತ್ರವನ್ನು ರಿಪೇರಿ ಮಾಡಿರುವುದಿಲ್ಲ ಹಾಗೂ ವಾರ್ಡ್‌ಗಳಲ್ಲಿ ವಿದ್ಯುತ್ತಿಕ್ಕೆ ವೈರಿಂಗ್‌ಗಳಿಲ್ಲಾ ಹಾಳಾಗಿರುವುದರಿಂದ ರೋಗಿಗಳು ಕತ್ತಲೆಯಲ್ಲಿಯೇ ಇರತಕ್ಕ ಪ್ರಸಂಗ ಬಂದಿದೆ. ಈ ಆಸ್ಪತ್ರೆಯಲ್ಲಿ ವೈದ್ಯರುಗಳ ಕೊರತೆ ಇದ್ದು ರೋಗಿಗಳಿಗೆ ಬಹಳ ತೊಂದರೆ ಉಂಟಾಗಿದೆ. ಮತ್ತು ಇದರ ಜೊತೆಗೆ ಬಾಣಂತಿ ಸೇವಾಕೇಂದ್ರವನ್ನು ಮಂಜೂರು ಮಾಡಿದ್ದರೂ ಸಹ ಇಲ್ಲಿಯವರಿಗೂ ಪ್ರಾರಂಭಿಸಿರುವುದಿಲ್ಲ. ಆದ್ದರಿಂದ ಕೂಡಲೇ ಈ ಆಸ್ಪತ್ರೆಯಲ್ಲಿರುವ ಎಲ್ಲಾ ಕೊರತೆಗಳನ್ನು ಬಗೆಹರಿಸಲು ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಸನ್ಮಾನ್ಯ ಆರೋಗ್ಯ ಸಚಿವರನ್ನು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಪಾಟೀಲ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೆ ಹೊಳೆನರಸೀಪುರದ ಸಾರ್ವಜನಿಕ ಆಸ್ಪತ್ರೆಯ ಹಾಸಿಗೆಗಳ ಸಂಖ್ಯೆಯನ್ನು

50ರಿಂದ 100ಕ್ಕೆ ಹೆಚ್ಚಿಸಲು ಸರ್ಕಾರಿ ಆದೇಶ ಸಂಖ್ಯೆ ಆಕುಕ 170, ಆಯೋಸಂ 92, ದಿನಾಂಕ 14-5-92ರಲ್ಲಿ ಮಂಜೂರಾತಿ ನೀಡಲಾಗಿದ್ದು, 100 ಹಾಸಿಗೆಗಳನ್ನು ಕಾರ್ಯಗತಗೊಳಿಸಲಾಗಿದೆ.

ಹೊಳೆನರಸೀಪುರ ಸಾರ್ವಜನಿಕ ಆಸ್ಪತ್ರೆಯು ಜಿಲ್ಲಾ ಪರಿಷತ್ ವ್ಯಾಪ್ತಿಯಿಂದ, ರಾಜ್ಯವಲಯಕ್ಕೆ ವರ್ಗಾವಣೆಯಾದ ಸಂಬಂಧದಲ್ಲಿ, ಜಿಲ್ಲಾ ಪರಿಷತ್ನಲ್ಲಿ ಈ ಆಸ್ಪತ್ರೆಗೆ ಒದಗಿಸಿದ್ದ ಅನುದಾನವನ್ನು ರಾಜ್ಯವಲಯಕ್ಕೆ ವರ್ಗಾಯಿಸಿದ ಸರ್ಕಾರಿ ಆದೇಶವು ಹೊರಡಿಸಲ್ಪಟ್ಟಿದೆ. ಈಗ ರೂ. 1.50 ಲಕ್ಷಗಳನ್ನು ಲೆನನ್, ಬೆಡ್ಡಿಂಗ್, ಡಯಾಟ್, ಪೀಠೋಪಕರಣ, ಇತ್ಯಾದಿಗಾಗಿ ಬಿಡುಗಡೆ ಮಾಡಲಾಗಿದೆ.

ಈ ಆಸ್ಪತ್ರೆಯ ಅಂಬ್ಯುಲೆನ್ಸ್ ವಾಹನವು ಕೂಡ ಕೆಟ್ಟಿದ್ದು, ದುರಸ್ತಿಗಾಗಿ ಅದನ್ನು ಆರೋಗ್ಯ ಇಲಾಖೆಯ ಕೇಂದ್ರೀಯ ಕಾರ್ಯಾಗಾರಕ್ಕೆ ದಿನಾಂಕ 20-11-93ರಂದು ಕಳುಹಿಸಲಾಗಿದೆ. ಸದರಿ ವಾಹನಕ್ಕೆ ಬೇಕಾದ ಹೆಚ್ಚುವರಿ ದುರಸ್ತಿಯನ್ನು ಕೈಗೊಳ್ಳಲಾಗುತ್ತಿದೆ.

ಈ ಆಸ್ಪತ್ರೆಗೆ ಔಷಧಕ್ಕಾಗಿ 4 ಲಕ್ಷ ರೂಪಾಯಿಗಳ ಅನುದಾನವಿರುತ್ತದೆ. ಇದರಲ್ಲಿ ರೂ. 1.75 ಲಕ್ಷಗಳ ಮೊತ್ತದ ಔಷಧಿಗಳನ್ನು ದಿನಾಂಕ 19-11-93ರ ವರೆಗೆ ಈ ಆಸ್ಪತ್ರೆಗೆ ಸರಬರಾಜು ಮಾಡಲಾಗಿರುತ್ತದೆ. ಬಾಕಿ ರೂ. 0.65 ಲಕ್ಷಗಳ ಮೊತ್ತದ ಔಷಧಿಗಳನ್ನು ಸರಬರಾಜು ಮಾಡಲು ವ್ಯವಸ್ಥೆ ಮಾಡಲಾಗಿದೆ. ಈ ಆಸ್ಪತ್ರೆಯ ಶಸ್ತ್ರ ಚಿಕಿತ್ಸಕರವರಿಗೆ ರೂ. 1.6 ಲಕ್ಷ ಮೊತ್ತದ ಔಷಧಿ ಖರೀದಿಸಲು ಅನುಮತಿ ಇದೆ.

ಈ ಆಸ್ಪತ್ರೆಯ ಕ್ಷ-ಕಿರಣ ಯಂತ್ರವು ಈಗ ಕೆಲಸ ಮಾಡುತ್ತಿದೆ. ಆಸ್ಪತ್ರೆಯಲ್ಲಿನ ವಾರ್ಡ್ಗಳಲ್ಲಿ ಹಾಳಾಗಿರುವ ವಿದ್ಯುತ್ ವೈರಿಂಗ್ಗಳ ದುರಸ್ತಿಯ ಬಗ್ಗೆ ಕ್ರಮ ಕೈಗೊಳ್ಳಲು ಸ್ಥಳೀಯ ಲೋಕೋಪಯೋಗಿ ಇಲಾಖೆಯನ್ನು ಕೋರಲಾಗಿದೆ.

ಈ ಆಸ್ಪತ್ರೆಗೆ 6 ವೈದ್ಯರುಗಳ ಹುದ್ದೆ ಮಂಜೂರಾಗಿದ್ದು ಅವುಗಳ ಪೈಕಿ 5 ಹುದ್ದೆಗಳು ಭರ್ತಿಯಾಗಿರುತ್ತವೆ.

ಬಾಣಂತಿಸೇವಾ ಕೇಂದ್ರವನ್ನು ಕೇಂದ್ರ ಸರ್ಕಾರದ ಅನುಮೋದನೆ ದೊರಕಿದ ಕೂಡಲೇ ಪ್ರಾರಂಭಿಸಲಾಗುವುದು.

12.00 ಪಿ.ಎಂ

ಪದವಿ ಪೂರ್ವ ಕಾಲೇಜಿನ ಪಠ್ಯಪುಸ್ತಕ 'ವೀರಾಂಗನೆ ಚೆನ್ನಮ್ಮ' ದಲ್ಲಿ ಇತಿಹಾಸವನ್ನು ವಿಕೃತಗೊಳಿಸುವ ವಿಷಯಗಳಿರುವುದರ ಬಗ್ಗೆ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ (ಕಿತ್ತೂರು) : ಮಾನ್ಯ ಅಧ್ಯಕ್ಷರೆ, ಕರ್ನಾಟಕದ ಹೆಮ್ಮೆಯ ರಾಣಿ ಕಿತ್ತೂರು ಚೆನ್ನಮ್ಮ ನಾಡಿನ ಜನರಿಗೆ ಸ್ಫೂರ್ತಿಯ ಶೆಲೆಯಾಗಿದ್ದಾಳೆ. ಇಂಥ ಸ್ವಾಭಿಮಾನಿ ವೀರ ವನಿತೆಯ ಇತಿಹಾಸವನ್ನು ವಿಕೃತಗೊಳಿಸಿ ಅವಳು :

1) ನಾಗರಮಲ್ಲ ಶೆಟ್ಟಿ ಎಂಬ ಬೈಲವೊಂಗಲದ ನಿವಾಸಿಯ ಆಶ್ರಯದಲ್ಲಿ ಬೆಳೆದಳು;
2) ರಾಯಣ್ಣ ಮತ್ತು ಬಾಳಣ್ಣ ಈ ನಾಗರಮಲ್ಲಶೆಟ್ಟಿಯ ಮಕ್ಕಳು;
3) ಮಲ್ಲಸರ್ಜನಿಗೆ ನಾಲ್ಕು ಜನ ಹೆಂಡರಿದ್ದರು;
4) ರಾಣಿ ರುದ್ರಮ್ಮ ಚಿಕ್ಕ ದೇಸಾಯಿಗೆ ಚೂರಿ ಹಾಕಿ ತಾನೂ ಆತ್ಮಹತ್ಯೆ ಮಾಡಿಕೊಂಡಳು ;
5) ಮಾಮಲೇದಾರ ಕೃಷ್ಣರಾಯನ ಸೈನಿಕರು ರಾಯಣ್ಣನನ್ನು ಹಿಡಿದರು;